ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 04.01.2024
ಪಾಟಿ ಸವಾಲು : ವಾದಿ ಪರ ಶ್ರೀ ಬಿ.ಕೆ.ಪಿ ವಕೀಲರಿಂದ

ವಾದಿ ಈ ದಾವೆಯನ್ನು ಯಾವ ಕಾರಣಕ್ಕೆ ಏನು ಪರಿಹಾರ ಕೋರಿ ಯಾವ ಸ್ವತ್ತಿನ ಸಂಬಂಧ ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿರುತ್ತದೆ. ದಾವಾ ಸ್ವತ್ತುಗಳು ವಾದಿಗೆ ತನ್ನ ತಂದೆಯ ಕಡೆಯಿಂದ ಬಂದಿರುವಂತಹ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ವಾದಿಯೇ ಮಾಲೀಕರಾಗಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸಾಕ್ಷಿಯು ಅವರ ಸ್ವತ್ತುಗಳಲ್ಲಿ ಅವರು ಮಾಲೀಕರಾಗಿ ಸ್ವಾಧೀನಾನುಭವ ಹೊಂದಿದ್ದಾರೆ ಎಂದು ನುಡಿಯುತ್ತಾರೆ.

ವಾದಿಯ ತಂದೆಯ ಕಡೆಯಿಂದ ನನ್ನ ತಂದೆ 3 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ ವಾದಿಯ ತಂದೆಯಿಂದ ಸ.ನಂ.606 ರಲ್ಲಿ 3 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಖರೀದಿ ಮಾಡಿದ್ದು ಅವರು ಖರೀದಿ ಮಾಡುವಾಗ ಸ.ನಂ.606 ರಲ್ಲಿ ಒಟ್ಟು 23 ಗುಂಟೆ ವಿಸ್ತೀರ್ಣದ ಸ್ವತ್ತು ಇತ್ತು. ನನ್ನ ತಂದೆ ಮೂರು ಗುಂಟೆ ವಿಸ್ತೀರ್ಣದ ಸ್ವತ್ತನ್ನು ಖರೀದಿ ಮಾಡಿದ ದಿನವೇ ಇನ್ನೂ ಮೂರು ವ್ಯಕ್ತಿಗಳು ತಲಾ ಮೂರು ಗುಂಟೆ ವಿಸ್ತೀರ್ಣದ ಸ್ವತ್ತನ್ನು ಸ.ನಂ.606 ರಲ್ಲಿ ವಾದಿಯ ತಂದೆಯಿಂದ ಖರೀದಿ ಮಾಡಿದ್ದರು ಎಂದರೆ ಸರಿ.

ನನ್ನ ತಂದೆ ಹಾಗೂ ಇತರೆ ಮೂರು ವ್ಯಕ್ತಿಗಳಿಗೆ ತಲಾ ಮೂರು ಗುಂಟೆಯಷ್ಟು ವಿಸ್ತೀರ್ಣದ ಜಮೀನನ್ನು ಮಾರಾಟ ಮಾಡಿದ ನಂತರ ಉಳಿದ ಸ್ವತ್ತಿನಲ್ಲಿ ವಾದಿಯ ತಂದೆ ಮಾಲೀಕರಾಗಿ ಸ್ವಾಧೀನಾನುಭವ ಹೊಂದಿದ್ದು ಅವರ ಮರಣದ ನಂತರ ವಾದಿಯೇ ಸದರಿ ಸ್ವತ್ತಿನ ಮಾಲೀಕರಾಗಿ ಸ್ವಾಧೀನಹೊಂದಿದ್ದಾರೆ ಎಂದರೆ ಸರಿ.

ನನ್ನ ತಂದೆ ಖರೀದಿ ಮಾಡಿದ ಸ್ವತ್ತಿನ ಚೆಕ್ಕುಬಂದಿ ಸರಿಯಾಗಿರುತ್ತದೆ. ನಿಡಿ.4 ಕ್ರಯ ಪತ್ರದಲ್ಲಿ ತೋರಿಸಿರುವ ಚೆಕ್ಕುಬಂದಿಯಲ್ಲಿನ ಆಸ್ತಿಗೆ ಮಾತ್ರ ನಾವು ಹಕ್ಕುದಾರರು ಎಂದರೆ ಸರಿ. ನಿಡಿ.4 ಕ್ರಯ ಪತ್ರದಲ್ಲಿನ ತಪಶೀಲಿನಲ್ಲಿ ಉತ್ತರ ದಿಕ್ಕಿಗೆ ರಸ್ತೆ ಇಲ್ಲ ಎಂದರೆ ಸರಿ. ಗ್ರಾಮ ಪಂಚಾಯಿತಿರವರಿಗೆ ಸುಳ್ಳು ಮಾಹಿತಿ ನೀಡಿ ಸುಳ್ಳು ಚೆಕ್ಕುಬಂದಿ ಸಂಬಂಧ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ. ನಾವು ಸುಳ್ಳು ಮಾಹಿತಿ ನೀಡಿ ಲೈಸನ್ಸ ಪಡೆದ ಕಾರಣ ವಾದಿ ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಯವರ ನ್ಯಾಯಾಲಯದಲ್ಲಿ

ಕೇಸು ದಾಖಲು ಮಾಡಿದ್ದು ಅದರಲ್ಲಿ ನ್ಯಾಯಾಲಯದ ತಡೆಯಾಜ್ಞೆ ನೀಡಿದೆ ಎಂದರೆ ಸರಿ. ನಮ್ಮ ಸ್ವತ್ತಿನ ಉತ್ತರ ದಿಕ್ಕಿಗೆ ಇರುವ ಬೋರೇಗೌಡ ರವರು ಎಷ್ಟು ವಿಸ್ತೀರ್ಣದ ಸ್ವತ್ತಿನಲ್ಲಿ ಮನೆ ಕಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಬೋರೇಗೌಡ ಉರುಫ್ ಕರೀಗೌಡ ರವರು ತಾವು ಖರೀದಿ ಮಾಡಿದ 3 ಗುಂಟೆ ಸ್ವತ್ತಿನ ಸಂಪೂರ್ಣ ಜಾಗದಲ್ಲಿ ಮನೆ ನಿರ್ಮಾಣ ಮಾಡಿಕೊಂಡಿದ್ದಾರೆ ಎಂದರೆ ಸರಿ. ಬೋರೇಗೌಡ ಉರುಫ್ ಕರೀಗೌಡ ರವರು ಮೂರು ಗುಂಟೆ ಸ್ವತ್ತಿನ ಜಾಗದಲ್ಲಿ ಮನೆ ನಿರ್ಮಾಣ ಮಾಡಿಕೊಂಡಿರುವುದು ಗೊತ್ತಿದ್ದರೂ ಕೂಡ ಅವರು ಓಡಾಡಲು ಜಾಗ ಬಿಟ್ಟುಕೊಂಡಿದ್ದಾರೆಂದು ಸುಳ್ಳು ಸಂಗತಿಯನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳು ವಾದಿಗೆ ಸೇರಿದ್ದ ವಿಚಾರ ನನಗೆ ಗೊತ್ತಿದ್ದರೂ ಕೂಡ ಅವರಿಗೆ ದಾವಾ ಸ್ವತ್ತುಗಳು ಸೇರಿಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತಪ್ಪಾಗಿ ನಮೂದಾಗಿದ್ದ ವಿಸ್ತೀರ್ಣದ ಸಂಬಂಧ ಸರಿ ಮಾಡಿ ಕೊಡಿ ಎಂದು ಕೋರಿ ಗ್ರಾಮ ಪಂಚಾಯಿತಿಯವರಿಗೆ ಅರ್ಜಿ ಸಲ್ಲಿಸಿದ್ದ ವಿಚಾರ ನನಗೆ ಗೊತ್ತಿಲ್ಲ. ವಿಸ್ತೀರ್ಣ ತಪ್ಪಾಗಿದ್ದ ವಿಚಾರ ನನ್ನ ತಾಯಿಗೆ ಗೊತ್ತಾಗಿದ್ದು ನಂತರ ದುರುದ್ದೇಶದಿಂದ ನನ್ನ ತಾಯಿ ವಾದಿಯ ಸ್ವತ್ತುಗಳಿಗೆ ಸಂಬಂಧಿಸಿದಂತೆ ತೊಂದರೆ ನೀಡುತ್ತಿದ್ದರು ಎಂದರೆ ಸುಳ್ಳು.

ಅರಕೆರೆ ಪೋಲೀಸ್ ಠಾಣೆಯಲ್ಲಿ ವಾದಿ ನನ್ನ ವಿರುದ್ದ 3-4 ಬಾರಿ ದೂರು ದಾಖಲಿಸಿದ್ದರು ಎಂದರೆ ಸುಳ್ಳು. ನಮ್ಮ ಸ್ವತ್ತಿನಲ್ಲಿ 23*21 ಅಡಿ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಬೇಸ್ ಮೆಂಟ್ ಹಾಕಲು ಲೈಸನ್ಸ ಪಡೆದಿದ್ದು ಶೆಡ್ ಅನ್ನು ನಿರ್ಮಿಸಿದ್ದೇವು. ಶೆಡ್ ನಿರ್ಮಿಸಿದ್ದ ವಿಸ್ತೀರ್ಣ ಹೇಳಲಾಗುವುದಿಲ್ಲ.

ನನ್ನ ತಂದೆ ಖರೀದಿ ಮಾಡಿದ ಸಂಪೂರ್ಣ ವಿಸ್ತೀರ್ಣದ ಸ್ವತ್ತು ಖಾಲಿ ಇದೆ ಎಂದರೆ ಸಾಕ್ಷಿಯು ಬೇಸ್ ಮೆಂಟ್ ಹಾಕಿ ಶೆಡ್ ಕೂಡ ನಿರ್ಮಿಸಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ಖರೀದಿ ಮಾಡಿದ ಸಂಪೂರ್ಣ ಸ್ವತ್ತು ಖಾಲಿ ಇದ್ದು ವಾದಿ ಕುರಿ ಸಾಗಾಣಿಕೆ ಮಾಡಲು ನಿರ್ಮಿಸಿಕೊಂಡಿದ್ದ ಶೆಡ್ ಅನ್ನು ನನ್ನದು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ತನಗೆ ಸೇರಿದ 11 ಗುಂಟೆ ಸ್ವತ್ತಿನ ಒಳಗೆ ಬೇಸ್ ಮೆಂಟ್ ನಿರ್ಮಿಸಿಕೊಂಡಿದ್ದಾರೆ ಅದು ನನಗೆ ಗೊತ್ತಿದ್ದರೂ ಕೂಡ ಅದು ನಾನು ನಿರ್ಮಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಈ ದಾವೆ ಸಲ್ಲಿಸಿದ್ದ ನಂತರ ತನಗೆ ಸೇರಿದ ಸ್ವತ್ತನ್ನು ಸರ್ವೆಯರ್ ರವರಿಂದ ಅಳತೆ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸ್ವತ್ತನ್ನು ಅಳತೆ ಮಾಡಿಸಿದ ವಿಚಾರ ಹಾಗೂ ಈ ಕೇಸು ದಾಖಲು ಮಾಡಿದ ವಿಚಾರ ನನ್ನ ತಾಯಿಗೆ ಮಾತ್ರ ಗೊತ್ತಿತ್ತು ಎಂದರೆ ಸರಿ. ಅಳತೆ ಮಾಡಿದ ಕಾಲಕ್ಕೆ ನಾವು ವಾದಿಗೆ ಸೇರಿದ ಸ್ವತ್ತನ್ನು ಅತಿಕ್ರಮಿಸಲು ಪ್ರಯತ್ನಿಸಿರುವುದು ಗೊತ್ತಾಗಿದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಏನು ಗೊತ್ತಿಲ್ಲವೆಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.